ಕಾಪು ಸಮೀಪದ ಲೈಟ್ ಹೌಸ್ ಬೀಟಿನ ಅಭಿವೃದ್ಧಿ

969. ಶ್ರೀ ವಸಂತ ವಿ. ಸಾಲ್ಯಾನ್ (ಕಾಪು) :– ಮಾನ್ಯ ವಾರ್ತಾ ಮತ್ತು ಪ್ರವಾಸೋದ್ಯಮ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ –

ಅ) ಪ್ರಕೃತಿದತ್ತವಾದ ನೈಸರ್ಗಿಕ ಸೌಂದರ್ಯದಿಂದ ಕೂಡಿದ ಕಾಪು ಸಮೀಪದ ಲೈಟ್ ಹೌಸ್ ಬೀಟನ್ನು (ಸಮುದ್ರತೀರ) ಅಭಿವೃದ್ಧಿ ಪಡಿಸುವ ಯೋಜನೆಯಯ ಬಗ್ಗೆ ಸರ್ಕಾರವು ತೆಗೆದುಕೊಂಡ ಕ್ರಮವೇನು;

ಆ) ಜಿಲ್ಲೆಯಲ್ಲಿ ಯಾವ ಯಾವ ಸಮುದ್ರ ತೀರದ ಬೀಟನ್ನು ಅಭಿವೃದ್ಧಿಪಡಿಸುವ ಯೋಜನೆಯನ್ನು ಸರ್ಕಾರವು ಕೈಗೊಂಡಿದೆ?

ಶ್ರೀ ಕೆ. ಶಿವಮೂರ್ತಿ (ವಾರ್ತಾ ಮತ್ತು ಪ್ರವಾಸೋದ್ಯಮ ರಾಜ್ಯ ಸಚಿವರು) –

ಅ) ಕಾಪುವನ್ನು ಸರ್ಕಾರವು ಈಗಾಗಲೇ ಪ್ರೇಕ್ಷಣೀಯ ಸ್ಥಳವೆಂದು ಗುರುತಿಸಿದೆ. ಈ ಸ್ಥಳವನ್ನು ಅಭಿವೃದ್ಧಿಪಡಿಸುವ ಬಗ್ಗೆ ಸದ್ಯಕ್ಕೆ ಯಾವ ಕಾರ್ಯಕ್ರಮವನ್ನು ಹಮ್ಮಿಕೊಂಡಿಲ್ಲ.

ಆ) ಮರವಂತೆ ಕಡಲತೀರದಲ್ಲಿ ಪ್ರವಾಸಿ ಸೌಲಭ್ಯಗಳನ್ನು ಒದಗಿಸಲು ಕೇಂದ್ರದ ನೆರವಿಗಾಗಿ ಪ್ರಸ್ತಾವನೆಯನ್ನು ಸಲ್ಲಿಸಲಾಗಿದೆ. ಈ ಯೋಜನೆ ಕೇಂದ್ರದ ನೆರವಿನ 1991–92ರ ಆದ್ಯತೆ ಪಟ್ಟಿಯಲ್ಲಿದೆ.

ಶಿವ ಧರ್ಮೇಟ್ಟು ಬಳಿ ಸೇತುವೆಯ ನಿರ್ಮಾಣ

964. ಶ್ರೀ ವಸಂತ ವಿ. ಸಾಲಿಯಾನ (ಕಾಪು) :– ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ –

1) ಕಾಪು ಕ್ಷೇತ್ರದ ಶಿವ ಧರ್ಮೇಟ್ಟು ಬಳಿ ಹೊಳೆಗೆ ನಿರ್ಮಿಸಲುದ್ದೇಶಿಸಿದ ಸೇತುವೆಯು ಎಂದು ಮಂಜೂರಾಗಿದೆ;
2) ಕಾಮಗಾರಿಯು ಯಾವ ಹಂತದಲ್ಲಿದೆ ;
3) ಅದಕ್ಕೆ ಬಿಡುಗಡೆ ಮಾಡಿರುವ ಹಣವೆಷ್ಟು ಮತ್ತು ಅದು ಸಂಪೂರ್ಣಗೊಳ್ಳಲು ಬೇಕಾಗಿರುವ ಕಾಲಾವಕಾಶವೆಷ್ಟು?

ಶ್ರೀ ಜೆ.ಹೆಚ್. ಅಶ್ವತ್ ರೆಡ್ಡಿ (ಲೋಕೋಪಯೋಗಿ ಸಚಿವರು) –

1) ಅಂದಾಜು ಪಟ್ಟಿ ಮಂಜೂರಾಗಿರುವುದಿಲ್ಲ.
2) ಉದ್ಭವಿಸುವುದಿಲ್ಲ
3) ಉದ್ಭವಿಸುವುದಿಲ್ಲ

ಜಕ್ಕೂರು ವಿಮಾನ ಹಾರಾಟ ತರಬೇತಿಯ ಬಗ್ಗೆ

1277. ಶ್ರೀ ಎಲ್. ಆರ್. ಶಿವರಾಮೇಗೌಡ (ನಾಗಮಂಗಲ):– ಮಾನ್ಯ ಯುವಜನ ಸೇವಾ ಕ್ರೀಡಾ ಮತ್ತು ಕನ್ನಡ ಮತ್ತು ಸಂಸ್ಕೃತಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ –

ಅ) ಜಕ್ಕೂರಿನ ಫ್ಲೈಯಿಂಗ್ ಶಾಲೆಗಾಗಿ ಸರ್ಕಾರ ಖರ್ಚು ಮಾಡುತ್ತಿರುವ ಹಣವೆಷ್ಟು ; (ವಾರ್ಷಿಕ ವಿವರ ನೀಡುವುದು) ;

ಆ) ಇಲ್ಲಿಯ ತರಬೇತಿಯ ವಿಮಾನಗಳು ಹಾಗೂ ತರಬೇತಿದಾರರ ಸಂಖ್ಯೆ ಎಷ್ಟು ;

ಇ) ಹಾರಾಟ ತರಬೇತಿಯನ್ನು ಎಷ್ಟು ಗಂಟೆಗಳ ಕಾಲ ನೀಡಲಾಗುತ್ತಿದೆ ಹಾಗೂ ಈ ತರಬೇತಿಯ ಅನುಕೂಲ ಪಡೆಯುತ್ತಿರುವ ಜನರೆಷ್ಟು (ವರ್ಷವಾರು ವಿವರ ನೀಡುವುದು);

ಈ) ಹೆಚ್ಚುವರಿ ತರಬೇತಿಗಾಗಿ ಡಿ.ಜಿ.ಸಿ.ಎ. ಅನುಮತಿಯನ್ನು ರಾಜ್ಯ ಸರ್ಕಾರ ಕೋರಿದೆಯೇ ;

ಶ್ರೀ ಎಸ್. ರಮೇಶ್ (ಯುವಜನ ಸೇವಾ ಕ್ರೀಡಾ, ಸಾಂಸ್ಕೃತಿಕ ಸಚಿವರು)

ಅ) (ರೂ. ಲಕ್ಷಗಳಲ್ಲಿ)

	ಖರ್ಚು	ಆದಾಯ
1987 – 88	19.59	7.44
1988 – 89	24.33	9.44
1989 – 90	23.63	8.86
1990 – 91	22.52	13.72
1991 – 92 (ಫೆಬ್ರುವರಿ 1992 ರವರೆಗೆ)	28.83	12.73

ಆ) ಆರು ವಿಮಾನಗಳು
ಮೂರು ತರಬೇತಿದಾರರು
(ಒಬ್ಬರು ಮುಖ್ಯ ವೈಮಾನಿಕ ತರಬೇತಿದಾರರು)
(ಎರಡು ಸಹಾಯಕ ವೈಮಾನಿಕ ತರಬೇತಿದಾರರು)

ಇ) ಖಾಸಗಿ ವಿಮಾನ ಚಾಲಕ ಲೈಸೆನ್ಸ್ 60 ಗಂಟೆಗಳು ನಿಗಧಿತ
ಪಡೆಯಲು ವೈಮಾನಿಕ ತರಬೇತಿ
ವಾಣಿಜ್ಯ ಪೈಲಟ್ ಲೈಸೆನ್ಸ್ ಪಡೆಯಲು ಅಗತ್ಯವಾದ ತರಬೇತಿಗೆ 250 ಗಂಟೆಗಳು ಕಡ್ಡಾಯ
ಇದರ ಜೊತೆಗೆ ತಾಂತ್ರಿಕ ಪರೀಕ್ಷೆಗಳನ್ನು ಸಹ ಪಾಸು ಮಾಡಬೇಕು.

ತರಬೇತಿಯ ಅನುಕೂಲ ಪಡೆಯುತ್ತಿರುವ ಜನರು

ವರ್ಷ	ತರಬೇತಿ ಪಡೆಯುತ್ತಿರುವ ವಿದ್ಯಾರ್ಥಿಗಳು	ಲೈಸೆನ್ಸ್ ಪಡೆದಿರುವವರು
1987 – 88	104	35
1988 – 89	137	33
1989 – 90	108	31
1990 – 91	121	42
1991 – 92	98	18

ಈ) ವಾಣಿಜ್ಯ ಪೈಲಟ್ ಲೈಸೆನ್ಸ್ ಪಡೆಯಲು ಈಗಾಗಲೇ ಹೆಚ್ಚುವರಿ ತರಬೇತಿ ನೀಡಲಾಗುತ್ತಿದೆ. ಆದರೂ ಸಹ ಈ ತರಬೇತಿಯನ್ನು ನವೀಕರಿಸಲು ಹಾಗೂ ಎರಡು ಇಂಜಿನ್‌ಗಳ ತರಬೇತಿ ಸಹ ಕೊಡುವ ಬಗ್ಗೆ ಯೋಜನೆಗೂ ಕೇಂದ್ರ (ಡಿ.ಜಿ.ಸಿ.ಎ) ಸರಕಾರದ ಒಪ್ಪಿಗೆಯನ್ನು ಕೋರಲಾಗಿದೆ.

ಗುಬ್ಬಿ ಕ್ಷೇತ್ರದ ಕೆರೆಗಳ ಒತ್ತುವರಿ ಬಗ್ಗೆ

1292. ಶ್ರೀ ಜಿ.ಎಸ್. ಶಿವನಂಜಪ್ಪ (ಗುಬ್ಬಿ) :– ಮಾನ್ಯ ಸಣ್ಣ ನೀರಾವರಿ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ –

ಅ) ಗುಬ್ಬಿ ಕ್ಷೇತ್ರದ ನಿಟ್ಟೂರು, ಕಡಬಾ ಹಾಗೂ ಗುಬ್ಬಿ ಕೆರೆಗಳು ತುಂಬಿ ಎಷ್ಟು ವರ್ಷಗಳಾದವು;

ಆ) ಈ ಕೆರೆಗಳ ಅಂಗಳಗಳು ಒತ್ತುವರಿ ಆಗಿರುವುದು ನಿಜವಲ್ಲವೇ; ಹಾಗಾದರೆ ಒತ್ತುವರಿಯನ್ನು ಖಾಲಿ ಮಾಡಿಸಲು ತೆಗೆದುಕೊಂಡ ಕ್ರಮಗಳೇನು;

ಇ) ಈ ಮೇಲ್ಕಂಡ ಮೂರು ಕೆರೆಗಳಲ್ಲಿ 10 ಅಡಿ ಊಳು ತುಂಬಿದ್ದು ನೀರು ಸಾಕಷ್ಟು ಶೇಖರಣೆಯಾಗದೇ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

1) ಈ ಕೆರೆಗಳ ಹೂಳು ತೆಗೆಯಲು ರೈತರು ಸರ್ಕಾರವನ್ನು ಒತ್ತಾಯಿಸುತ್ತಿರುವುದು ನಿಜವೆ;

2) ಹಾಗಾದರೆ ಯಾವಾಗ ಕ್ರಮ ಕೈಗೊಳ್ಳಲಾಗುವುದು ?